ಒ ಎಸ್ 234/2023 ಪಿ.ಡಬ್ಲ್ಯೂ: 1

ಇಂದು ದಿ: 01.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 3ನೇ ಪ್ರತಿವಾದಿ ಪರ ಶ್ರೀ ವಕೀಲರಿಂದ:

ನಮ್ಮ ತಾಯಿ ನಂಜನಗೂಡಿನ ಆನಂದಪುರದವರು ಎಂದರೆ ಸರಿ. ನಮ್ಮ ತಂದೆ ಹಾಸನ ತಾಲ್ಲೂಕಿನ ಬ್ರಹ್ಮದೇವರ ಹಳ್ಳಿಯವರು . ನಮ್ಮ ತಾಯಿ ಮದುವೆಯಾಗಿ ತಂದೆ ಜೊತೆ ಸ್ವಲ್ಪ ಸಮಯ ಇದ್ದು ನಂತರ ಆನಂದಪುರಕ್ಕೆ ಬಂದರು ಎಂದರೆ ಸರಿ. ದಾವಾ 1ನೇ ಆಸ್ತಿಯ ನಂಜನಗೂಡಿನ ಆನಂದಪುರದ ಆಸ್ತಿ, 2ನೇ ಆಸ್ತಿಯ ನನ್ನ ತಂದೆ ಊರಿನ ಆಸ್ತಿ ಎಂದರೆ ಸರಿ . 1ನೇ ಆಸ್ತಿಯನ್ನು ದಿ: 23.02.2000 ರಂದು ನನ್ನ ತಾಯಿ ಮಹದೇವರಿಂದ ಖರೀದಿ ಮಾಡಿದ್ದರು ಎಂದರೆ ಸರಿ. ನನ್ನ ತಾಯಿಯ ತಂದೆ ಹಣಕಾಸು ಸಹಾಯ ಮಾಡಿ ನನ್ನ ತಾಯಿ ಖರೀದಿಸಿದರು ಎಂದರೆ ಸರಿ. 2ನೇ ಆಸ್ತಿ ಮಾತ್ರ ಪಿತ್ರಾರ್ಜಿತ ಆಸ್ತಿ, 1ನೇ ಆಸ್ತಿ ನನ್ನ ತಾಯಿ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. 1ನೆ ಆಸ್ತಿ ನನ್ನ ತಾಯಿ ಸ್ವಯಾರ್ಜಿತ ಆಸ್ತಿ ಆದ ಕಾರಣ ನನ್ನ ತಾಯಿಗೆ ಮಾರಾಟ ಮಾಡಲು ಸಂಪೂರ್ಣ ಹಕ್ಕು ಇದೆ ಎಂದರೆ ಸರಿ. 1ನೇ ಆಸ್ತಿಯಲ್ಲಿ ನನಗೆ ಹಕ್ಕ ಇಲ್ಲ ಎಂದರೆ ಸರಿಯಲ್ಲ. 1ನೆ ಆಸ್ತಿ ನನ್ನ ತಾಯಿ ಸ್ವಯಾರ್ಜಿತ ಆಸ್ತಿ ಆದ ಕಾರಣ ಅದರ ದಕ್ಷಿಣ ಪಾಶ್ವದ ಸ್ವತ್ತಿನ ಅರ್ಧ ಭಾಗವನ್ನು 3ನೇ ಪ್ರತಿವಾದಿಗೆ ದಿನಾಂಕ 18.01.2023 ರಂದು ಕ್ರಯಕ್ಕೆ ಕೊಟ್ಟಿದ್ದಾರೆ ಎಂದರೆ ಸರಿ. ಉಳಿಕೆ ಆಸ್ತಿಯನ್ನು ನನ್ನ ಸಹೋದರನಿಗೆ ದಿನಾಂಕ 18.01.2023 ರಂದು ಧಾನಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರನ ನಡುವೆ ಸಂಬಂಧ ಈಗ ಚೆನ್ನಾಗಿಲ್ಲ. ನಿಪಿ .3 ರ ಧಾನಪತ್ರವು ನನ್ನ ತಾಯಿ ಮನೆಯಲ್ಲಿ ಇತ್ತು. ನಿಪಿ .3 ದಾಖಲೆಯನ್ನು ನನ್ನ ಸಹೋದರನಿಗೆ ಕೇಳದೆ ತೆಗೆದುಕೊಂಡಿದ್ದೇನೆ. 3ನೇ ಪ್ರತಿವಾದಿಯು ದಾವಾ ಆಸ್ತಿಯು ಅರ್ಧ ಭಾಗವನ್ನು ಖರೀದಿ ಮಾಡುವಾಗ ಸಂಪೂರ್ಣ ದಾಖಲೆ ಪರಿಶೀಲಿಸಿ ಖರೀದಿ ಮಾಡಿದ್ದಾರೆ ನನಗೆ ಅದರಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ವಿರುದ್ಧ ದುರ್ಲಾಭ ಪಡೆಯಲು ಸುಳ್ಳು ದಾವಾ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2ನೇ ಐಟಂ ಆಸ್ತಿಯು ನಮ್ಮ ಕುಟುಂಬದ ಆಸ್ತಿಯಾದ ಕಾರಣ ಅದರಲ್ಲಿ ನನಗೆ ಹಕ್ಕ ಇದ್ದು 1ನೇ ಐಟಂ ಮೇಲೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2ನೇ ಆಸ್ತಿಯು ನಂಜನಗೂಡು ತಾಲ್ಲೂಕಿನಿಂದ ಹೊರತುಪಡಿಸಿ ಬೇರೆ ಕಡೆ ಇರುವುದರಿಂದ ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ನಂಜನಗೂಡಿನ 1ನೇ ಹೆಚ್ಚುವರಿ ನ್ಯಾಯಾಲಯದಲ್ಲಿ 2 ಮತ್ತು 3ನೇ ಪ್ರತಿವಾದಿ ವಿರುದ್ಧ ಒ ಎಸ್ 468/23 ರಂತೆ ಕೇಸು ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಎಲ್ಲಾ ಕಾರಣಗಳಿಂದಾಗಿ ನನ್ನ ದಾವೆ ಊರ್ಜಿತವಲ್ಲ ಮತ್ತು 3ನೇ ಪ್ರತಿವಾದಿಯ ಸದ್ಭಾವಿತ ಖರೀದಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.